**OS 343/2021- DW-3**

ದಿನಾಂಕಃ **25.09.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

DW-3 ರವರ ಪಾಟೀಸವಾಲು ವಾದಿ ಪರ ಶ್ರೀ ಎನ್ ಬಿ ಜಿ ವಕೀಲರಿಂದ

ನಾನು ಎರಡು ವರ್ಷಗಳಿಂದ ಮೈಸೂರಿನಲ್ಲಿ ವಾಸವಾಗಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ಸಂಖ್ಯೆ ನನಗೆ ಗೊತ್ತಿಲ್ಲ. ಪೂರ್ವಕ್ಕೆ - ನನ್ನ ಸ್ವತ್ತು ಇರುತ್ತದೆ. ಪಶ್ಚಿಮಕ್ಕೆ - ಸುರೇಶ್ ರವರ ಜಮೀನು, ಉತ್ತರಕ್ಕೆ - ರಸ್ತೆ, ದಕ್ಷಿಣಕ್ಕೆ - ಯಾರು ಇರುತ್ತಾರೆಂಬುದು ನನಗೆ ಗೊತ್ತಿಲ್ಲ. ದೊಡ್ಡಬ್ಯಾಡರಹಳ್ಳಿಯಲ್ಲಿ ನಾನು ವಾಸವಿಲ್ಲ ಆದರೆ ನಮ್ಮ ಕುಟುಂಬದವರು ವಾಸವಿರುತ್ತಾರೆ ಆದರೆ ನಾನು ಆಗಾಗ ಬಂದು ಹೋಗುತ್ತೇನೆ. ನಾನು ಪ್ರತಿವಾದಿಯ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ದಾವಾ ಸ್ವತ್ತು ಒಟ್ಟು **0-37** ಗುಂಟೆ ಇರುತ್ತದೆ. ದಾವಾ ಸ್ವತ್ತನ್ನು ಲಿಂಗೇಗೌಡ ರವರು ಮರಿಚೆನ್ನಮ್ಮ ಉಃ ಚಿಕ್ಕತಾಯಮ್ಮ ರವರಿಂದ **10.10.1949** ರಲ್ಲಿ ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಸದರಿ ಸ್ವತ್ತಿನ ಖರೀದಿ ಪತ್ರದ ಆಧಾರದ ಮೇಲೆ ಪಹಣಿ ಪತ್ರಿಕೆಯು ಲಿಂಗೇಗೌಡರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಜಯಮ್ಮ ರವರ ಗಂಡನ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ಜಯಮ್ಮರವರ ಗಂಡ ದಾವಾ ಸ್ವತ್ತಿನ ಆಧಾರದ ಮೇಲೆ ಸಾಲವನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಯಮ್ಮ ರವರ ಗಂಡ **04.11.2019** ರಂದು ಮೃತಪಟ್ಟಿರುತ್ತಾರೆಂದರೆ ಸರಿ.

ಸದರಿ ಜಯಮ್ಮನ ಗಂಡ ಮೃತಪಟ್ಟ ನಂತರ ಅವರ ವಾರಸುದಾರರು ಜಮೀನಿನ ಸಾಗುವಳಿ ಮಾಡುತ್ತಿದ್ದಾರೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನದಲ್ಲಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಸಾ.ಓ.ಹೇ.ಸ. ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಪಾಂಡವಪುರ.